ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	1496
ಸದಸ್ಯರ ಹೆಸರು	:	ಡಾ: ಕೆ. ಗೋವಿಂದ ರಾಜ್ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	10-03-2022
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

ಕ್ರ ಸಂ	ಪ್ರಶ್ನೆ	ಉತ್ತರ
ಅ.	ಬೆಂಗಳೂರು ನಗರಕ್ಕೆ ಕಾವೇರಿ ಕುಡಿಯುವ ನೀರು ಸರಬರಾಜು ಯೋಜನೆಯ 5ನೇ ಹಂತದ ಕಾಮಗಾರಿ ಪ್ರಾರಂಭ ಆಗಿದ್ದು ಯಾವಾಗ; (ಯೋಜನಾ ವೆಚ್ಚ, ವಾರ್ಷಿಕ ಅನುದಾನ -ವೆಚ್ಚ, ಕಾಮಗಾರಿ ಪ್ರಗತಿ ನಿರ್ವಹಣೆಯ ಸಹಭಾಗಿತ್ವ ಮತ್ತು ಶೇಕಡಾವಾರು ಪಾಲುದಾರಿಕೆಯ ಬಗ್ಗೆ ಪ್ರತ್ಯೇಕ ಮಾಹಿತಿ ಒದಗಿಸುವುದು)	ಕಾವೇರಿ ನೀರು ಸರಬರಾಜು ಯೋಜನೆಯ 5ನೇ ಹಂತದ ಯೋಜನೆಗೆ ಜೈಕಾ ಸಂಸ್ಥೆಯ ವತಿಯಿಂದ ಆರ್ಥಿಕ ನೆರವನ್ನು ಪಡೆಯಲಾಗುತ್ತಿದ್ದು, ಈ ಯೋಜನೆಯಿಂದ ಬೆಂಗಳೂರಿನ 110 ಹಳ್ಳಿಗಳಿಗೆ ನೀರು ಸರಬರಾಜು ಮಾಡಲಾಗುತ್ತದೆ. ಸರ್ಕಾರವು ಈ ಯೋಜನೆಗೆ ಅಂದಾಜು ವೆಚ್ಚವಾದ ರೂ.5550.00 ಕೋಟಿಗಳಿಗೆ ಸರ್ಕಾರದ ಆದೇಶದ ಸಂಖ್ಯೆ: ನ.ಅ.ಇ/11/ ಎಮ್.ಎಸ್.ಐ/2015 ದಿನಾಂಕ:12.10.2017 ರಂದು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದು, ದಿನಾಂಕ:24.01.2018 ರಂದು ಒಪ್ಪಂದ ಕರಾರಿನ ಅನ್ವಯ ಈ ಯೋಜನೆಗೆ ಆರ್ಥಿಕ ನೆರವನ್ನು ಜೈಕಾ ಸಂಸ್ಥೆಯ ವತಿಯಿಂದ ಪಡೆದಿದ್ದು, ಶೇಕಡಾವಾರು ಪಾಲುದಾರಿಕೆ ಈ ರೀತಿ ಇರುತ್ತದೆ. ಜೈಕಾ ಸಂಸ್ಥೆಯಿಂದ ಶೇಕಡ 84ರಷ್ಟು, ಕರ್ನಾಟಕ ಸರ್ಕಾರದ ಅನುದಾನ ಶೇಕಡ 8 ರಷ್ಟು ಮತ್ತು ಬೆಂಗಳೂರು ಜಲಮಂಡಳಿಯ ಪಾಲು ಶೇಕಡ 8ರಷ್ಟು ಇರುತ್ತದೆ. ಇದರಿಂದ ಬೆಂಗಳೂರು ನಗರಕ್ಕೆ ದಿನಂಪ್ರತಿ 775 ದಶಲಕ್ಷ ಲೀಟರ್ ಹೆಚ್ಚುವರಿ ನೀರು ದೊರೆಯುವುದು. ಈ ಯೋಜನೆಯ ಭಾಗವಾಗಿ Project Management ಸೇವೆಯನ್ನು ನಿಯೋಜಿಸಲು M/s ONTB (JV of M/s Oriental Consultants Global Co. Ltd., M/s NJS Engineers India Pvt Ltd., M/s TATA Consulting Engineers Ltd., M/s Black and Veatech) ಸಂಸ್ಥೆಗೆ 2018-19 ನೇ ಸಾಲಿನಲ್ಲಿ ಗುತ್ತಿಗೆ ನೀಡಲಾಗಿದೆ ಮತ್ತು ಈ ಯೋಜನೆ ಅಡಿಯಲ್ಲಿ 09 Water Packages ಗಳಿಗೆ 2019-20, 2020-21 ರ ಸಾಲಿನಲ್ಲಿ ಹಂತ-ಹಂತವಾಗಿ ಕಾರ್ಯಾದೇಶಗಳನ್ನು ಒಟ್ಟಾರೆ ರೂ.3738.00 ಕೋಟಿಗಳಿಗೆ ನೀಡಲಾಗಿದ್ದು, ಸದರಿ ಕಾಮಗಾರಿಗಳು ಪ್ರಾರಂಭಗೊಂಡಿದ್ದು ಹಾಗೂ ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ. ವಾರ್ಷಿಕ ಅನುದಾನ - ವೆಚ್ಚದ ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಲಾಗಿದೆ. ಈ ಯೋಜನೆಯ ಅಡಿಯಲ್ಲಿ 03 Sewerage Package ಗಳಿಗೆ 2020-21 ರ ಸಾಲಿನಲ್ಲಿ ಹಂತ-ಹಂತವಾಗಿ ಕಾರ್ಯಾದೇಶವನ್ನು ರೂ.1014.00ಕೋಟಿಗಳಿಗೆ ನೀಡಲಾಗಿರುತ್ತದೆ.

...2)

ಆ	5ನೇ ಹಂತದ ಯೋಜನೆಯಿಂದ ನಗರದ ಯಾವ ಯಾವ ಭಾಗಗಳಿಗೆ ಕಾವೇರಿ ನೀರು ಪೂರೈಕೆಗೆ ಯೋಜಿಸಲಾಗಿದೆ; ಈ ಭಾಗಗಳಲ್ಲಿ ಪ್ರಸ್ತುತ ಕಾಮಗಾರಿಯ ಪ್ರಗತಿ ಏನು; (ಸಂಪೂರ್ಣ ಮಾಹಿತಿ ಒದಗಿಸುವುದು)	ಈ ಯೋಜನೆಯಿಂದ ಬೆಂಗಳೂರಿನ ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳಿಗೆ ನೀರು ಸರಬರಾಜು ಮಾಡಲಾಗುತ್ತದೆ.
ಇ	ಈ ಯೋಜನೆ ಪೂರ್ಣಗೊಳ್ಳುವುದು ಯಾವಾಗ;	ಈ ಯೋಜನೆಯು ಜೈಕಾದೊಂದಿಗೆ ಆಗಿರುವ MoD ಪ್ರಕಾರ ಆಗಸ್ಟ್-2023ರಲ್ಲಿ ಕುಡಿಯುವ ನೀರಿನ ಪ್ಯಾಕೇಜ್‌ಗಳು ಪೂರ್ಣಗೊಳ್ಳಬೇಕಾಗಿರುತ್ತದೆ. ಕಾಮಗಾರಿಗಳ ಪ್ರಗತಿಯ ಅನ್ವಯ ಸದರಿ ಯೋಜನೆಯು ಮಾರ್ಚ್ 2023ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.
ಈ	ಯೋಜನೆಯು ವಿಳಂಬ ಗತಿಯಲ್ಲಿ ಸಾಗುತ್ತಿರುವುದರಿಂದ, ರಸ್ತೆಗಳಲ್ಲಿ ಗುಂಡಿ, ಅಪೂರ್ಣ ಕಾಮಗಾರಿಯಿಂದಾಗಿ ಸಾರ್ವಜನಿಕರು, ವಾಹನಗಳ ಸವಾರರು ಅನುಭವಿಸುತ್ತಿರುವ ತೊಂದರೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆಯೇ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು?	ಕಾವೇರಿ 5ನೇ ಹಂತದ ಯೋಜನೆಗೆ ಕೋವಿಡ್-19 (1ನೇ ಮತ್ತು 2ನೇ ಅಲೆ) ನಿಂದಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾರಿ ಮಾಡಿರುವಂತಹ ಆದೇಶಗಳ ಹಿನ್ನೆಲೆಯಲ್ಲಿ 1ನೇ ಅಲೆಯಲ್ಲಿ 6 ತಿಂಗಳು, 2ನೇ ಅಲೆಯಲ್ಲಿ 2 ತಿಂಗಳು ಮತ್ತು ಆಕ್ಸಿಜನ್ ಸಿಲಿಂಡರ್‌ಗಳ ಕೊರತೆಯ ಹಿನ್ನೆಲೆಯಲ್ಲಿ ಹಾಗೂ 3ನೇ ಅಲೆಯಲ್ಲಿ ವಾರಾಂತ್ಯ ಮತ್ತು ನೈಟ್ ಕರ್ಫ್ಯೂ ಜಾರಿ ಮಾಡಿರುವ ಹಿನ್ನೆಲೆಯಲ್ಲಿ ಕಾಮಗಾರಿಗಳ ಪ್ರಗತಿಯು ಕುಂಠಿತಗೊಂಡಿದ್ದರೂ, ಮಾರ್ಚ್- 2023ರ ವೇಳೆಗೆ ಸದರಿ Water Packages ಯೋಜನೆಯನ್ನು ಮುಕ್ತಾಯಗೊಳಿಸುವ ನಿರೀಕ್ಷೆಯಿರುತ್ತದೆ. ಈ ಯೋಜನೆಯ ಸಿ.ಪಿ-09 ಮತ್ತು ಸಿ.ಪಿ-10 ಪ್ಯಾಕೇಜ್ ಅಡಿಯಲ್ಲಿ ನೀರು ಸರಬರಾಜಿನ ಮುಖ್ಯ ಕೊಳವೆ ಮಾರ್ಗವನ್ನು ಬೆಂಗಳೂರು ನಗರದಲ್ಲಿ ಅಳವಡಿಸುತ್ತಿದ್ದು, ಕೊಳವೆ ಮಾರ್ಗ ಅಳವಡಿಸಿದ ನಂತರ ರಸ್ತೆಯನ್ನು ಗುತ್ತಿಗೆ ನಿಯಮಾನುಸಾರ ಮೊದಲಿನ ಸ್ಥಿತಿಗೆ ಪುನರ್ ನಿರ್ಮಾಣ ಮಾಡಲಾಗುತ್ತಿದೆ. ಸದರಿ ಕಾಮಗಾರಿಯ ಒಪ್ಪಂದದ ಗುತ್ತಿಗೆ ಕರಾರಿನ ಪ್ರಕಾರ ಪ್ರಸ್ತುತ ದಿನಾಂಕದವರೆಗೆ ಯಾವುದೇ ವಿಳಂಬವಾಗಿರುವುದಿಲ್ಲ ಹಾಗೂ ಕಾಮಗಾರಿಗಳು ಒಪ್ಪಂದದ ಗುತ್ತಿಗೆ ಕರಾರಿನ ಪ್ರಕಾರ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ನಿರೀಕ್ಷೆಯಲ್ಲಿರುತ್ತದೆ.

ಸಂಖ್ಯೆ: ನಅಇ 29 ಎಂಎಸ್ಐ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಅನುಬಂಧ-1

ವಾರ್ಷಿಕ ಅನುದಾನ – ವೆಚ್ಚದ ವಿವರಗಳು

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ										ರೂ.ಕೋಟಿಗಳಲ್ಲಿ			
ಯೋಜನೆ	ಯೋಜನಾ ವೆಚ್ಚ	ಜೈಕ್ ಮತ್ತು ಸರ್ಕಾರದ ಪಾಲಿನ ಮೊತ್ತ (ಶೇ.84 + 8)	ಲೆಕ್ಕಶೀರ್ಷಿಕೆ	2018-19		2019-20		2020-21		2021-22		ಒಟ್ಟು	
				ಹಂಚಿಕೆ ಅನುದಾನ	ಬಿಡುಗಡೆ ಮಾಡಿದ ಅನುದಾನ	ಹಂಚಿಕೆ ಅನುದಾನ	ಬಿಡುಗಡೆ ಮಾಡಿದ ಅನುದಾನ	ಹಂಚಿಕೆ ಅನುದಾನ	ಬಿಡುಗಡೆ ಮಾಡಿದ ಅನುದಾನ	ಹಂಚಿಕೆ ಅನುದಾನ	ಬಿಡುಗಡೆ ಮಾಡಿದ ಅನುದಾನ (ದಿ. 07-03-2022ರ ಅಂತ್ಯಕ್ಕೆ)	ಹಂಚಿಕೆ ಅನುದಾನ	ಬಿಡುಗಡೆ ಮಾಡಿದ ಅನುದಾನ
ಕಾವೇರಿ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆ- 5ನೇ ಹಂತ	5550.00	5106.00	6215-01-190-2-86	20.00	20.00	139.25	139.25	288.87	288.87	900.00	837.49	1,348.12	1,285.61

ಮುಖ್ಯ ಅಭಿಯಂತರರು (ಕಾ)
ಬೆಂಗಳೂರು ಜಲಮಂಡಳಿ